ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

ಸಂಖ್ಯೆ: ಕವಿಪ್ರನಿನಿ/ಬಿ5ಬಿ/11333/2009-10 ದಿನಾಂಕ: 18 DEC 2018

## ಸುತ್ತೋಲೆ

**ವಿಷಯ:** ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳ ಘೋಷಣೆಯ ಬಗ್ಗೆ.

**ಉಲ್ಲೇಖ:**
1. ನಿಗಮದ ಆದೇಶ ಸಂಖ್ಯೆ: ಕೆಇಬಿ/ಬಿ4/7626/85-86 ದಿನಾಂಕ: 07-08-1987.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ34/ಎಸ್‌ಎ4/7626/ 85-86 ದಿನಾಂಕ: 03.02.2009.

---

ಕವಿಮಂ ನೌಕರರ ಸೇವಾ (ನಡೆತ) ನಿಬಂಧನೆಗಳು 1988ರ ನಿಬಂಧನೆ 23 ರ ಅನ್ವಯ ಅಧಿಕಾರಿಗಳು/ನೌಕರರು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ ಪ್ರತೀ ವರ್ಷವೂ ಸಲ್ಲಿಸಬೇಕಾಗಿರುತ್ತದೆ. ನಿಗದಿತ ದಿನಾಂಕದಂದು ಸಲ್ಲಿಸದಿದ್ದಲ್ಲಿ, ಕರ್ತವ್ಯ ಲೋಪವೆಂದು ಪರಿಗಣಿಸುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ, ರಾಜ್ಯಾವಾರು ಪದವೃಂದದ ಅಧಿಕಾರಿಗಳು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಹಾಗೂ ಇತರೆ ಸಿಬ್ಬಂದಿಯು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳಿಗೆ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ತಪ್ಪದೇ ಸಲ್ಲಿಸತಕ್ಕದ್ದು.

ನಿಗಮವು 2018 ನೇ ಸಾಲಿನಿಂದ ಜಾರಿಗೆ ಬರುವಂತೆ ಅಧಿಕಾರಿಗಳು/ನೌಕರರು ಸಲ್ಲಿಸಬೇಕಿರುವ ಆಸ್ತಿ ಹಾಗೂ ಹೊಣೆಗಳ ವಿವರಗಳ ಪಟ್ಟಿಯನ್ನು ಪರಿಷ್ಕರಿಸಿದ್ದು, **ಪರಿಷ್ಕೃತ ನಮೂನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.** ಆದ್ದರಿಂದ, ಎಲ್ಲಾ ಅಧಿಕಾರಿಗಳು/ನೌಕರರು 2018 ನೇ ಸಾಲಿನ ಆಸ್ತಿ ಹಾಗೂ ಹೊಣೆಗಳ ವಿವರಗಳ ಪಟ್ಟಿಯನ್ನು ಪರಿಷ್ಕೃತ ನಮೂನೆಯಲ್ಲಿಯೇ ತಪ್ಪದೇ ಸಂಬಂಧಿಸಿದ ಪ್ರಾಧಿಕಾರಗಳಿಗೆ ಸಲ್ಲಿಸಲು ಸೂಚಿಸಿದೆ. ಹಳೆಯ ನಮೂನೆಗಳಲ್ಲಿ ಅಧಿಕಾರಿಗಳು/ನೌಕರರು ಸಲ್ಲಿಸುವ ಆಸ್ತಿ ಹಾಗೂ ಹೊಣೆಗಳ ವಿವರಗಳ ಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ.

ಈ ವಿಷಯದಲ್ಲಿ ಕೆಳಕಂಡ ನಿರ್ದೇಶನವನ್ನು ನೀಡಲಾಗಿದೆ:

1. ಪ್ರತೀ ವರ್ಷದಂತೆ ಎಲ್ಲಾ ಅಧಿಕಾರಿಗಳು/ನೌಕರರು ಈ ವರ್ಷವೂ ಸಹ **ದಿನಾಂಕ 31-12-2018 ರಂದು ಇರುವಂತೆ** ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಮೇಲೆ ತಿಳಿಸಿದಂತೆ ಸಂಬಂಧಿಸಿದ ಕಛೇರಿಗಳಿಗೆ ಆಸ್ತಿ ಮತ್ತು ಹೊಣೆಗಳ ಪಟ್ಟಿಯೊಂದಿಗೆ **ಅನುಬಂಧದ ಪತ್ರವನ್ನು ಲಗತ್ತಿಸಿ** ಸಲ್ಲಿಸತಕ್ಕದ್ದು.

2. ರಾಜ್ಯಾವಾರು ಪದವೃಂದದ ಅಧಿಕಾರಿಗಳು ವಿವರಗಳನ್ನು ಹಾಗೂ **ತಮ್ಮ ಪಿ.ಐ.ಎನ್. ಸಂಖ್ಯೆಯನ್ನು** ತಪ್ಪದೇ ನಮೂದಿಸಿ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ ರವರಿಗೆ ನೇರವಾಗಿ ಕಳುಹಿಸತಕ್ಕದ್ದು.

3. ಸಂಬಂಧಿಸಿದ ನೇಮಕಾತಿ ಪ್ರಾಧಿಕಾರವು ಈ ವಿವರವನ್ನು ನಿಗದಿತ ನಮೂನೆಯಲ್ಲಿ 'ಸಿ' ಮತ್ತು 'ಡಿ' ಗುಂಪಿನ ನೌಕರರಿಂದ ಪಡೆದು ಅವರ ಕಛೇರಿಯಲ್ಲಿ ವೈಯಕ್ತಿಕ ಕಡತಗಳನ್ನು ನಿರ್ವಹಿಸತಕ್ಕದ್ದು.

4. ಅಧಿಕಾರಿಗಳು/ನೌಕರರು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸದೇ ಇದ್ದಲ್ಲಿ, ಅವರಿಗೆ ನಿರಾಕ್ಷೇಪಣಾ ಪತ್ರಗಳನ್ನು ಅಥವಾ ಯಾವುದೇ ವಿಶೇಷ ಅನುಮತಿಯನ್ನು ನೀಡತಕ್ಕದ್ದಲ್ಲ.

5. ಅಧಿಕಾರಿಗಳು/ನೌಕರರು <u>ತಮ್ಮ 2018 ರ ಕ್ಯಾಲೆಂಡರ್ ವರ್ಷದ</u> ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಂಬಂಧಿಸಿದ ಕಛೇರಿಗಳಿಗೆ ಸಲ್ಲಿಸಲು **ಕೊನೆಯ ದಿನಾಂಕ: <u>28.02.2019.</u>** ವಿವರವನ್ನು ಸಲ್ಲಿಸದ ಅಧಿಕಾರಿಗಳ/ನೌಕರರ ವಿರುದ್ಧ <u>ದಿನಾಂಕ:01.03.2019 ರ ನಂತರ</u> ಸಂಬಂಧಿಸಿದ ಮೇಲಾಧಿಕಾರಿಗಳು ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು.

6. 'ಎ' ಮತ್ತು 'ಬಿ' ಗುಂಪಿನ ಎಲ್ಲಾ ಅಧಿಕಾರಿಗಳು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸಿದ ಬಗ್ಗೆ <u>**ಮಾರ್ಚ್ 2019 ತಿಂಗಳ ವೇತನದ ಹುಂಡಿಯಲ್ಲಿ**</u> ದೃಢೀಕರಿಸತಕ್ಕದ್ದು.

7. ಎಲ್ಲಾ ಅಧಿಕಾರಿ/ನೌಕರರು ಸಲ್ಲಿಸಿರುವ ಪ್ರಸ್ತುತ ವರ್ಷದ ಚರ/ಸ್ಥಿರ ಆಸ್ತಿ ಮತ್ತು ಹೊಣೆ ಪಟ್ಟಿಯನ್ನು ಹಿಂದಿನ ವರ್ಷದ ಆಸ್ತಿ ಮತ್ತು ಹೊಣೆ ಪಟ್ಟಿಯೊಂದಿಗೆ ಹೋಲಿಕೆ ಮಾಡಿ, ಹೆಚ್ಚಿನ ವ್ಯತ್ಯಾಸ/ಅಂತರ ಕಂಡುಬಂದಲ್ಲಿ, ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳು ಸಂಬಂಧಿಸಿದ ಅಧಿಕಾರಿ/ನೌಕರರುಗಳಿಗೆ ಪತ್ರದ ಮೂಲಕ ಸ್ಪಷ್ಟೀಕರಣವನ್ನು ಪಡೆದು ಕಡತದಲ್ಲಿ ಸೇರಿಸುವಂತೆ ಸೂಚಿಸಿದೆ.

8. ನೌಕರರ ಸೇವಾ (ನಡತೆ) ನಿಯಮ 14 ರಲ್ಲಿ ತಿಳಿಸಿರುವಂತೆ ಅಧಿಕಾರಿ/ನೌಕರರು ಬಂಧುಗಳಿಂದ ಅಥವಾ ಆಪ್ತ ಸ್ನೇಹಿತರಿಂದ ನಗದು ಅಥವಾ ವಸ್ತುಗಳ ರೂಪದಲ್ಲಿ ಪಡೆದ/ಸ್ವೀಕರಿಸಿದ ಕೊಡುಗೆಗಳು ನಿಗಧಿ ಪಡಿಸಿರುವ ಮೊತ್ತಕ್ಕಿಂತ ಹೆಚ್ಚಿದ್ದರೆ ಈ ಬಗ್ಗೆ ನೇಮಕಾತಿ ಪ್ರಾಧಿಕಾರಗಳಿಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ.

9. ನೌಕರರ ಸೇವಾ (ನಡತೆ) ನಿಯಮ 23 ರಲ್ಲಿ ತಿಳಿಸಿರುವಂತೆ ಅಧಿಕಾರಿ/ನೌಕರರು ಚರ ಮತ್ತು ಸ್ಥಿರ ಆಸ್ತಿ ವಿಷಯದಲ್ಲಿ ವರದಿ ಮಾಡುವ ಅಥವಾ ಪೂರ್ವಾನುಮತಿಯನ್ನು ಪಡೆಯಬೇಕಾಗಿರುವ ಸಂದರ್ಭದಲ್ಲಿ ನೇಮಕಾತಿ ಪ್ರಾಧಿಕಾರಗಳಿಂದ ಕಡ್ಡಾಯವಾಗಿ ಅನುಮತಿಯನ್ನು ಪಡೆಯತಕ್ಕದು.

ಮೇಲಾಧಿಕಾರಿಗಳು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯ ಗಮನಕ್ಕೆ ಮೇಲಿನ ಸೂಚನೆಗಳನ್ನು ತಪ್ಪದೇ ತರಲು ಕೋರಿದೆ. ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳನ್ನು ಸಲ್ಲಿಸಬೇಕಿರುವ <u>**ಪರಿಷ್ಕೃತ ನಮೂನೆಯನ್ನು**</u> ಕವಿಪ್ರನಿನಿಯ ಜಾಲತಾಣದ: <u>www.kptcl.com=>eprasarana</u> ದಲ್ಲಿ ಪಡೆಯಬಹುದಾಗಿದೆ.

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)
ಕವಿಪ್ರನಿನಿ

<u>ಪ್ರತಿಗಳು:</u>

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ನಿರ್ದೇಶಕರು (ಹಣಕಾಸು), ಬೆಸ್ಕಾಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.)/(ನಿ.ವ್ಯ.) ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಆಪ್ತ ಕಾರ್ಯದರ್ಶಿಗಳು, ಬೆಂ.

<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ಎಲ್ಲಾ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ & ನಿರ್ದೇಶಕರು, ಕವಿಪ್ರನಿನಿ/ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಗೆಸ್ಕಾಂ/ಚಾವಿಸನಿನಿ, ಬೆಂಗಳೂರು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.

---

ಮೆಮೋಸಂಖ್ಯೆ:ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ಸಿ)-1/ಕಿಸ/ಕ-139/2018-19 ದಿನಾಂಕ:-21.12.2018

ಪ್ರತಿ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ

OS-4057

17 JAN 2019

1. ಮುಖ್ಯ ಇಂಜಿನೀಯರ್(ವಿ)/ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವಲಯ, ಹುವಿಸಕಂನಿ., ಹುಬ್ಬಳ್ಳಿ/ಬೆಳಗಾವಿ.
2. ಎಲ್ಲಾ ಅಧೀಕ್ಷಕ ಇಂಜಿನೀಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ, ಹುವಿಸಕಂನಿ.,
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ ಮತ್ತು ಪಾ ವಿಭಾಗ, ಹುವಿಸಕಂನಿ.,
4. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ ಮತ್ತು ಪಾ ಉಪ-ವಿಭಾಗ, ಹುವಿಸಕಂನಿ.,

ಸುತ್ತೋಲೆಯಲ್ಲಿನ ಅಂಶಗಳನ್ವಯ ಹುವಿಸಕಂನಿಯಿಂದ ನೇಮಕಗೊಂಡ ಪದವೃಂದದ ಅಧಿಕಾರಿಗಳು ಕಂಪನಿ ಕಾರ್ಯಾಲಯಕ್ಕೆ ಮತ್ತು ಇತರೆ ಸಿಬ್ಬಂದಿಗಳು ಸಂಬಂದಿಸಿದ ನೇಮಕಾತಿ ಪ್ರಾಧಿಕಾರಿಗಳಿಗೆ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ತಪ್ಪದೇ ಸಲ್ಲಿಸತಕ್ಕದ್ದು,

ಮೇಲಾಧಿಕಾರಿಗಳು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸಿಬ್ಬಂದಿಯ ಗಮನಕ್ಕೆ ಮೇಲಿನ ಸುತ್ತೋಲೆಯಲ್ಲಿನ ಸೂಚನೆಗಳನ್ನು ತಪ್ಪದೇ ತರಲು ಕೋರಿದೆ.ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳನ್ನು ಸಲ್ಲಿಸಬೇಕಿರುವ ಪರೀಷ್ಕೃತ ನಮೂನೆಯನ್ನು ಕವಿಪ್ರನಿನಿ,ಯ ಜಾಲತಾಣ:www.kptcl.com=>eprasarana ದಲ್ಲಿ ಪಡೆಯಬಹುದಾಗಿದೆ.

ಪ್ರತಿಗಳು:

1. ಆರ್ಥಿಕ ಸಲಹೆಗಾರರು(ಆಂ.ಪ), ಕಂಪನಿ ಕಾರ್ಯಾಲಯದ ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ.
2. ಹಿರಿಯ ಆಪ್ತ ಕಾರ್ಯದರ್ಶಿ,ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ತಾಂತ್ರಿಕ), ಕಂಪನಿ ಕಾರ್ಯಾಲಯ,ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ,ಹಾಗೂ ಮೇಲ್ಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
3. ಆಪ್ತ ಕಾರ್ಯದರ್ಶಿ,ಮುಖ್ಯ ಅರ್ಥಿಕ ಅಧಿಕಾರಿ, ಕಂಪನಿ ಕಾರ್ಯಾಲಯದ ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ.ಹಾಗೂ ಮೇಲ್ಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. **www.hescom.co.in** ವೆಬ್ ಸೈಟನಲ್ಲಿ ಪ್ರಕಟಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾ.ಸಂ.ಅ)